ರಾಜ್ಯದಲ್ಲಿ ಮೀನುಗಾರಿಕಾ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ

465(4369) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೀನುಗಾರಿಕಾ ಇಲಾಖಾ ರಸ್ತೆಗಳೆಂದು ಗುರುತಿಸಲ್ಪಟ್ಟ ರಸ್ತೆಗಳು ಯಾವುವು; (ಜಿಲ್ಲಾವಾರು ವಿವರ ನೀಡುವುದು);

ಆ) ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಗೊಳಿಸಿದ ಹಣವೆಷ್ಟು; (ಜಿಲಾವಾರು ವಿವರ ನೀಡುವುದು)?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಜಿಲ್ಲಾವಾರು ಮೀನುಗಾರಿಕೆ ರಸ್ತೆಗಳ ವಿವರಗಳನ್ನು ಅನುಬಂಧ (1)ರಲ್ಲಿ ನೀಡಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕೆ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಬಿಡುಗಡೆಗೊಳಿಸಿದ ಹಣದ ಜಿಲ್ಲಾವಾರು ವಿವರಗಳನ್ನು ಅನುಬಂಧ(2)ರಲ್ಲಿ ನೀಡಲಾಗಿದೆ.

ವಿಧಾನ ಸಭಾ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 465(4369)ರ ಅನುಬಂಧ-1

ಜಿಲ್ಲಾವಾರು ಮೀನುಗಾರಿಕೆ ರಸ್ತೆಗಳ ವಿವರ

ಕ್ರಮ ಸಂಖ್ಯೆ	ರಸ್ತೆ ಹೆಸರು	ಉದ್ದ (ಕಿ.ಮೀ)
1	2	3
1.	ಉಚ್ಚಿಲ ಫೋರ್ಟಿನಿಂದ ಉಳ್ಳಾಲ ರೈಲ್ವೇ ನಿಲ್ದಾಣ ತನಕ	2.60
2.	ಸೋಮೇಶ್ವರ ಫೋರ್ಟಿನಿಂದ ತಲವಾಡಿ ನದಿ ತನಕ	1.00
3.	ಉಳ್ಳಾಲ ಸುಭಾಸ್ ನಗರದಿಂದ ಕೈಕೋ ಫ್ಯಾಕ್ಟರಿ ತನಕ	1.00
4.	ಉಳ್ಳಾಲ ಪಾಂಡ್ಯರಾಜ ಆಸ್ಪತ್ರೆಯಿಂದ ಬೀಚ್‌ತನಕ ರಸ್ತೆ	0.50
5.	ಉಳ್ಳಾಲ ಮುಕ್ಕಚ್ಚೇರಿ ರಸ್ತೆ	1.00
6.	ಉಳ್ಳಾಲ ಕೋಟೆಪುರದಿಂದ ಅಳಿವೆ ಬಾಗಿಲುವರೆಗೆ ರಸ್ತೆ	2.00
7.	ಬೆಂಗ್ರೆ ಫರಿ ಧಕ್ಕೆಯಿಂದ ತಣ್ಣೀರುಬಾವಿ-ಬೆಂಗ್ರೆ ರಸ್ತೆಗೆ ಸಂಪರ್ಕ	0.60
8.	ತಣ್ಣೀರುಬಾವಿ ಬೆಂಗ್ರೆ ರಸ್ತೆ	5.00
9.	ಬೈಕಂಪಾಡಿ ಮೀನಕಳಿ ಕರಾವಳಿ ರಸ್ತೆ	2.00
10.	ಚಿತ್ರಾಪುರ ಕುಳಾಯಿ ಮೀನುಗಾರಿಕೆ ರಸ್ತೆ	2.50
11.	ಹೊಸಬೆಟ್ಟು ಎನ್.ಹೆಚ್.ನಿಂದ ಕಾಳಪ್ಪಯ್ಯ ರಸ್ತೆಯ ಸಂಪರ್ಕ ರಸ್ತೆ	1.50
12.	ಹೊಸಬೆಟ್ಟು ಮೀನುಗಾರಿಕೆ ರಸ್ತೆ (ಕರಾವಳಿ ಸಂಪರ್ಕ ರಸ್ತೆ)	1.00
13.	ಸುರತ್ಕಲ್‌ನಿಂದ ಗುಡ್ಡೆಕೊಪ್ಪ ಕರಾವಳಿ ರಸ್ತೆ	1.00
14.	ಸುರತ್ಕಲ್‌ನಿಂದ ದೊಡ್ಡಕೊಪ್ಪ ಕರಾವಳಿ ರಸ್ತೆ	1.00
15.	ಸಸಿಹಿತ್ಲು ಭಗವತಿ ದೇವಸ್ಥಾನದಿಂದ ತೂಗು ಸೇತುವೆ ತನಕ	1.00
16.	ಸಸಿಹಿತ್ಲು, ಕದಿಕೆ-ಲಚ್ಚಿಲ್ ಮೀನುಗಾರಿಕೆ ರಸ್ತೆ (ಮುಕ್ಕ ಮೂಲಕ ಬಾವಾ ಫಿಶ್ ಮೀಲ್)	3.00
17.	ಮುಕ್ಕ-ಸಸಿಹಿತ್ಲು ಮೀನುಗಾರಿಕೆ ರಸ್ತೆ	1.50

1	2	3
18.	ಹಳೆಯಂಗಡಿ ಕದಿಕೆ ಮೀನುಗಾರಿಕೆ ರಸ್ತೆ	1.00
19.	ಕುಳುವೈಲ್ ಮೀನುಗಾರಿಕೆ ರಸ್ತೆ (ಹಳೆಯಂಗಡಿಯಿಂದ ಸಸಿಹಿತ್ಲು ಸಂಪರ್ಕ)	2.00
20.	ಮಿತ್ರಪಟ್ನ ಮೀನುಗಾರಿಕೆ ರಸ್ತೆ (ಮಚ್ಚಿಂಗಳ್ ಮಂಜುಗಡ್ಡೆ ಕಾರ್ಖಾನೆ ಎದುರು)	1.00
21.	ಚಿತ್ರಾಪುರ ಗಜನಿ ಮೀನುಗಾರಿಕೆ ಸಂಪರ್ಕ ರಸ್ತೆ	1.50
22.	ಕಾರ್ನಾಡ್ ಚಿತ್ರಾಪು–ಪಡುವಣಂಬೂರು ಮೀನುಗಾರಿಕೆ ರಸ್ತೆ	3.00
23.	ಮಂಗಳೂರು ಮೀನುಗಾರಿಕಾ ಬಂದರು ಮುಖ್ಯ ರಸ್ತೆ	0.50
24.	ಮಂಗಳೂರು ಬೆಂಗ್ರೆ ಮೀನುಗಾರಿಕೆ ರಸ್ತೆ	5.00
25.	ಅರಂತೋಡು ಮಹರ್ಷಿ ಮಲ್ಲಿಕಾರ್ಜುನ ದೇವಸ್ಥಾನದ ರಸ್ತೆ	5.15
26.	ಮುಲ್ಕಿ ವಿಜಯಾ ಕಾಲೇಜ್ ಮಟ್ಟು ರಸ್ತೆ	1.66
	ಒಟ್ಟು	**49.01**
	ಉಡುಪಿ ಜಿಲ್ಲಾ ಮೀನುಗಾರಿಕೆ ಕೊಂಡಿ ರಸ್ತೆಗಳು	
1.	ಹೆಜಮಾಡಿಕೊಂಡಿ ಫೋರ್ಟ್ ಮೀನುಗಾರಿಕೆ ರಸ್ತೆ	1.00
2.	ಹೆಜಮಾಡಿಯಲ್ಲಿ ಸಮುದ್ರ ತೀರಕ್ಕೆ ಸಮಾನಾಂತರ ರಸ್ತೆ	1.50
3.	ಅಮಾಸೆ ಕರಿಯ ಹೆಜಮಾಡಿ ಮೀನುಗಾರಿಕೆ ರಸ್ತೆ	1.00
4.	ಹೆಜಮಾಡಿಯಲ್ಲಿ 19.5 ಮೈಲ್ ಕಲ್ಲನ್ನು ಸೇರುವ ರಸ್ತೆ	1.80
5.	ಹೆಜಮಾಡಿಯಲ್ಲಿ 21.70 ಮೈಲ್ ಕಲ್ಲನ್ನು ಸೇರುವ ರಸ್ತೆ	1.60
6.	ಪಡುಬಿದ್ರಿ ಸಮುದ್ರ ಬದಿಯಿಂದ ಸಮಾನಾಂತರ ರಸ್ತೆ (ಪಡುಬಿದ್ರಿ ನಡಿಪಟ್ನ ರಸ್ತೆ)	2.00
7.	ನಡಸಾಲು ಪಡುಬಿದ್ರಿ ಮೀನುಗಾರಿಕೆ ರಸ್ತೆ (34.20 ರಿಂದ 0.00–0.85 ತನಕ)	0.85
8.	ತೆಂಕ ಎರ್ಮಾಳ್‌ನಿಂದ 27.3 ಮೈಲ್ ಕಲ್ಲು ಮುಖ್ಯ ರಸ್ತೆ ತನಕ	1.00
9.	ತೆಂಕ ಎರ್ಮಾಳ್ ಮೀನುಗಾರಿಕೆ ರಸ್ತೆಯನ್ನು ದಕ್ಷಿಣಕ್ಕೆ ವಿಸ್ತರಿಸಿದ್ದು	0.50
10.	ತೆಂಕ ಎಮಾಳ್ – ಬಡಾ ಎರ್ಮಾಳ್ ಮೀನುಗಾರಿಕೆ ರಸ್ತೆ	2.00
11.	ಬಡಾ ಎರ್ಮಾಳ್ ಸಮಾನಾಂತರ ಮೀನುಗಾರಿಕೆ ರಸ್ತೆ	1.00
12.	24.6 ಮೈಲ್ ಕಲ್ಲಿನಿಂದ ಎರ್ಮಾಳ್ ಬಡಾ ಮೀನುಗಾರಿಕೆ ಇಳಿದಾಣದವರೆಗೆ ರಸ್ತೆ	0.90
13.	ಉಚ್ಚಿಲ ಮಹಾಲಕ್ಷ್ಮಿ ಮೀನುಗಾರಿಕೆ ರಸ್ತೆ– ಬಡಾ ಎರ್ಮಾಳ್ ಮೀನುಗಾರಿಕೆ ರಸ್ತೆ ಜೋಡಣೆ	1.00
14.	ಉಚ್ಚಿಲ ಮಹಾಲಿಂಗೇಶ್ವರ ದೇವಸ್ಥಾನದಿಂದ ಸಮುದ್ರ ತೀರ ರಸ್ತೆ	0.80
15.	ಸುಭಾಶ್ ಉಚ್ಚಿಲ ಮೀನುಗಾರಿಕೆ ರಸ್ತೆ	–
16.	ಉಚ್ಚಿಲ ಗುರುನಾರಾಯಣ ಮಂದಿರದ ಹತ್ತಿರದ ರಸ್ತೆ	0.75

1	2	3
17.	ಮೂಳೂರು ಮೀನುಗಾರಿಕೆ ರಸ್ತೆ	0.85
18.	ಕಾಪು ಲೈತ್ ಹೌಸ್‌ನಿಂದ ಮೂಳೂರು ರಸ್ತೆ	2.00
19.	ಕಾಪು ಮುಖ್ಯ ರಸ್ತೆಯ 28.2 ಮೈಲಿ ಕಲ್ಲಿನಿಂದ ಲೈಟ್ ಹೌಸ್ ತನಕದ ರಸ್ತೆ	0.80
20.	ಪೋಲಿಪುವಿನಿಂದ ಮುಖ್ಯ ರಸ್ತೆಯ 29.1 ಮೈಲಿ ಕಲ್ಲಿನ ವರೆಗಿನ ರಸ್ತೆ	2.00
21.	ಪೋಲಿಪುವಿನಿಂದ ಕಾಪು ಲೈಟ್ ಹೌಸ್ ತನಕದ ರಸ್ತೆ	1.60
22.	ಕಾಪು ಪೋಲಿಪು ಮೀನುಗಾರಿಕೆ ರಸ್ತೆ	2.00
23.	ಕೈಪುಂಜಾಲು ಮಟ್ಟು ಪಡುಕರೆ ರಸ್ತೆ	7.00
24.	ಕೈಪುಂಜಾಲು ಪೊಲಿಪು ರಸ್ತೆ	1.50
25.	ಉಳಿಯಾರಗೋಳಿನಿಂದ ಕೋತ್ವಾಲಗುತ್ತು ತನಕ (ಮುಖ್ಯರಸ್ತೆಯ 29.7 ಮೈಲಿ)	1.40
26.	ಕೊಪ್ಪಳಂಗಡಿಯಿಂದ ಮುಖ್ಯ ರಸ್ತೆಯ 27.56 ಮೈಲ್ ಕಲ್ಲಿನ ತನಕ	1.10
27.	ಕಟಪಾಡಿ ಕೋಟೆ ಕಮಾನು ಮೀನುಗಾರಿಕೆ ರಸ್ತೆ	1.50
28.	ಕಟಪಾಡಿ ಮಟ್ಟು ಮೀನುಗಾರಿಕೆ ರಸ್ತೆ	1.50
29.	ಕಡೇಕಾರ್ ಪರಗಟ್ಟ ಕರಾವಳಿ ರಸ್ತೆ (ಮುಖ್ಯ ರಸ್ತೆಯ 34/6 ಮೈಲಿ ಕಲ್ಲಿನಿಂದ)	0.90
30.	ಕಡೇಕಾರ್ ಪಟಗಟ್ಟ ಕರಾವಳಿ ರಸ್ತೆ	0.30
31.	ಉದ್ಯಾವರ–ಪಿತ್ರೋಡಿ ಮೀನುಗಾರಿಕೆ ರಸ್ತೆ (34/1 ಮೈಲ್ ಕಲ್ಲಿನಿಂದ ಮುಖ್ಯರಸ್ತೆಯವರೆಗೆ)	2.40
32.	ಮಲ್ಪೆ–ತೊಟ್ಟಂ ರಸ್ತೆ	2.00
33.	ಮಲ್ಪೆತೊಟ್ಟಂ ಮತ್ತು ಗುಜ್ಜರ ಬೆಟ್ಟು ನಡುವೆ ಮೀನುಗಾರಿಕೆ ರಸ್ತೆ	3.40
34.	ಗುಜ್ಜರಬೆಟ್ಟು–ಹೂಡೆ ರಸ್ತೆ	1.50
35.	ಹೂಡೆ – ಬೆಂಗ್ರೆ ಮೀನುಗಾರಿಕೆ ರಸ್ತೆ	2.50
36.	ಮಲ್ಪೆಯಿಂದ ಬಾಪು ತೋಟದ ವರೆಗೆ ಮೀನುಗಾರಿಕೆ ರಸ್ತೆ	1.00
37.	ಮಲ್ಪೆ ಮೀನುಗಾರಿಕಾ ಬಂದರಿನ ಹಿಂದಿನ ರಸ್ತೆ ಸಮುದ್ರ ತೀರದ ವರೆಗೆ	0.48
38.	ವಡಂಬಾಂಡೇಶ್ವರ ಬೀಚ್‌ನಿಂದ ಕೊಡವೂರು ಸುಬ್ಬ ರಾವ್ ರಸ್ತೆ ತನಕ	1.40
39.	ವಡಂಬಾಂಡೇಶ್ವರ ಬೀಚ್ ರಸ್ತೆ, ಮಲ್ಪೆ	1.50
40.	ಕೋಡಿ ಕನ್ಯಾನ ಕೋಡಿತಲೆ ರಸ್ತೆ	2.50
41.	ಮಾಬುಕಳ ಹಂಗಾರಕಟ್ಟೆ ಮೀನುಗಾರಿಕೆ ರಸ್ತೆ	2.00
42.	ಸಾಸ್ತಾನ ಕೋಡಿ ಮೀನುಗಾರಿಕೆ ರಸ್ತೆ	1.40
43.	ಕೋಟಾದಿಂದ ಮುಖ್ಯ ರಸ್ತೆಯ 32/4 ಮೈಲ್ ಕಲ್ಲಿನವರೆಗೆ	2.20
44.	ಕೋಟಾ ಗಿಳಿಯಾರ್ ಮೀನುಗಾರಿಕೆ ರಸ್ತೆ	2.40
45.	ಕೋಟಾ ಪಡುಕೆರೆ ಮೀನುಗಾರಿಕೆ ರಸ್ತೆ	.20

1	2	3
46.	ಪಾರಂಪಳ್ಳಿ ಪಡುಕೆರೆ ಮೀನುಗಾರಿಕೆ ರಸ್ತೆ	1.00
47.	ಮಣೂರು ತಕ್ಕಟ್ಟೆ ಮೀನುಗಾರಿಕೆ ರಸ್ತೆ	2.40
48.	ಮಣೂರು ಕೋಡಿ ಕನ್ಯಾನ ಮೀನುಗಾರಿಕೆ ರಸ್ತೆ	5.00
49.	ಬೆನಗಲ್ ಮೊಗವೀರ ಪೇಟೆಯಿಂದ ಕೊಕ್ಕರ್ಣೆ ಮೀನುಗಾರಿಕೆ ರಸ್ತೆ	2.00
50.	ತೊಟ್ಟಂ ಕೋಡಿಬೆಂಗ್ರೆ ರಸ್ತೆ	3.00
51.	ಉಪ್ಪಿನ ಕೋಟೆ ಹೂನ್ನಾಳೆ ರಸ್ತೆ	3.00
52.	ಉಪ್ಪುಂದು ಗೇರು ಸಂಸ್ಕರಣಾ ಕೇಂದ್ರದಿಂದ ಕರ್ಕಿಕಲಿ ರಸ್ತೆ	3.00
53.	ಮಹಲಿಂಗೇಶ್ವರ ಕುಂಬಾಶಿ ಕರಾವಳಿ ಕರ್ಕಿಕಾಡು ಕಿನಾರೆ ರಸ್ತೆ	2.50
54.	ಮರವಂತೆ ಫಿಶಿಂಗ್ ಯಾರ್ಡಿನಿಂದ ಎನ್.ಹೆಚ್. 17ರವರೆಗೆ ರಸ್ತೆ	1.01
55.	ಕಾಂತೇಶ್ವರ ಕಲಾವಳಿ ಮೀನುಗಾರಿಕೆ ರಸ್ತೆ	0.60
56.	ಬೀಜಾಡಿ ದೊಡ್ಡಾಣಿ ಕರಾವಳಿ ರಸ್ತೆ	1.10
57.	ಗುಜ್ಜಾಡಿ ಬಸವೇಶ್ವರ ಭಜನಾ ಮಂದಿರದಿಂದ ಕುಂಚಗೋಡು ರಸ್ತೆ	0.50
58.	ಎಂ.ಎಸ್.ಪೈ ಅಂಗಡಿಯಿಂದ ಗಂಗೊಳ್ಳಿ ಐಸ್ ಪ್ಲಾಂಟ್ ರಸ್ತೆ	0.44
59.	ಕಾರ್ಕೆಡ ಕಾವಾಡಿ ರಸ್ತೆ	2.41
60.	ಬೈಕಾಡಿ ಭದ್ರಗಿರಿ ಪಡುಬೈಕಾಡಿ ರಸ್ತೆ	1.00
61.	ಹೆಜಮಾಡಿ ಪಾರಾಪಟ್ಟ ರಸ್ತೆ	1.00
62.	ಕೋಟೆ ಕಮಾನು ರಸ್ತೆ	1.00
63.	ಹೆಜಮಾಡಿ ಬಸ್ ನಿಲ್ದಾಣದಿಂದ ಮೀನುಗಾರಿಕೆ ಶಾಲೆಯವರೆಗಿನ ರಸ್ತೆ	7.75
64.	ಹಿರಿಕುದ್ರು ಸ್ಕೂಲ್ ರಸ್ತೆ	2.95
65.	ಹಂಪನಕಟ್ಟ ಬೈಲಕೆರೆ ಮಲ್ಪೆ ರಸ್ತೆ	2.70
66.	ತೆಕ್ಕಟ್ಟೆ ಕೋಡಿ ಕರಾವಳಿ ರಸ್ತೆ	11.00
67.	ತೆಕ್ಕಟ್ಟೆ ಮಕ್ಕಿಬೆಟ್ಟು ರಸ್ತೆ	0.50
68.	ತೆಕ್ಕಟ್ಟೆ ಕೊರವಾಡಿ ಮೀನುಗಾರಿಕೆ ರಸ್ತೆ	2.40
69.	ತೆಕ್ಕಟ್ಟೆಯಿಂದ ಕೋಣೆ ಮೀನುಗಾರಿಕೆ ರಸ್ತೆ	2.40
70.	ತೆಕ್ಕಟ್ಟೆ ಜೂನಿಯರ್ ಕಾಲೇಜಿನ ಎದುರುಗಡೆ ರಸ್ತೆ	0.90
71.	ಕುಂಭಾಶಿಯಿಂದ ಕೊರವಾಡಿ ಮೀನುಗಾರಿಕೆ ರಸ್ತೆ	2.40
72.	ಗೋಪಾಡಿಯಿಂದ ಸಾಂತೇಶ್ವರ ಮೀನುಗಾರಿಕೆ ರಸ್ತೆ	1.60
73.	ಬೀಜಾಡಿ ಮೀನುಗಾರಿಕೆ ರಸ್ತೆ	2.50
74.	ಹದ್ರೋಲಿ ಅಮಾಸೆ ಕಡಿ ಮೀನುಗಾರಿಕೆ ರಸ್ತೆ	2.40
75.	ಕೋಟೇಶ್ವರ ತೀರದ ಮೀನುಗಾರಿಕೆ ರಸ್ತೆ	2.50
76.	ಕೋಡಿ ವಿನಾಯಕ ಮೀನುಗಾರಿಕೆ ರಸ್ತೆ	3.00
77.	ಗಂಗೊಳ್ಳಿ ಮೀನುಗಾರಿಕೆ ಬಂದರು ರಸ್ತೆ	1.30
78.	ಗಂಗೊಳ್ಳಿ ಮೀನುಗಾರಿಕೆ ಬಂದರಿನ ಉತ್ತರ ಭಾಗದಲ್ಲಿ ರಸ್ತೆ ನಿರ್ಮಾಣ	0.25

1	2	3
79.	ಗಂಗೊಳ್ಳಿ ಮೀನುಗಾರಿಕೆ ಜೆಟ್ಟಿಯಿಂದ ಚರ್ಚ್ ರಸ್ತೆ	1.00
80.	ಗಂಗೊಳ್ಳಿ ಐಸ್ ಪ್ಲಾಂಟಿನಿಂದ ಚರ್ಚ್ ರಸ್ತೆ	1.00
81.	ಗಂಗೊಳ್ಳಿ ಮೀನುಗಾರಿಕೆ ತೀರದ ರಸ್ತೆ ದಕ್ಷಿಣದಿಂದ ಉತ್ತರಕ್ಕೆ ದೀಪ ಸ್ತಂಭದ ತನಕ	2.00
82.	ಕೊಡಪಾಡಿ ಕಂದಿಗೋಡು ಮೀನುಗಾರಿಕೆ ರಸ್ತೆ	1.00
83.	ಗುಜ್ಜಾಡಿ ಕಂಚುಗೋಡು ರಸ್ತೆ	1.00
84.	ಮರವಂತೆ ಮೀನುಗಾರಿಕೆ ರಸ್ತೆ	1.00
85.	ಮರವಂತೆ ಮಸೀದಿಯಿಂದ ಸಮುದ್ರ ಕಿನಾರೆ ಹೋಗುವ ರಸ್ತೆ	1.25
86.	ನಾವುಂದ ಮಸ್ಕಿ ಮೀನುಗಾರಿಕೆ ರಸ್ತೆ (ಹೈಸ್ಕೂಲ್ ಎದುರುಗಡೆ)	0.30
87.	ನಾವುಂದ ಮಸ್ಕಿ ಮೀನುಗಾರಿಕೆ ರಸ್ತೆ	0.30
88.	ಕಿರಿಮಂಜೇಶ್ವರ ಕರಾವಳಿ ಮೀನುಗಾರಿಕೆ ರಸ್ತೆ	0.65
89.	ಕೊಡೇರಿ ಮೀನುಗಾರಿಕೆ ರಸ್ತೆ (ಕಿರಿಮಂಜೇಶ್ವರ ಊರಲ್ಲಿ)	2.01
90.	ಕೊಡೇರಿ ಸ್ಮಶಾನ ರಸ್ತೆ	3.00
91.	ಹೊಸಹಿತ್ಲು ಭಜನಾ ಮಂದಿರ ಮೀನುಗಾರಿಕೆ ರಸ್ತೆ (ಕಿರಿಮಂಜೇಶ್ವರ ಊರಲ್ಲಿ)	1.35
92.	ಕಂಭದಕೋಣೆ ಮೀನುಗಾರಿಕೆ ರಸ್ತೆ	1.65
93.	ಉಪ್ಪುಂದ ಅಂಬಾಗಿಲು ಮೆಡಿಕಲ್ ಮೀನುಗಾರಿಕೆ ರಸ್ತೆ	1.80
94.	ಉಪ್ಪುಂದ ತಾರಾಪತಿ ಮೀನುಗಾರಿಕೆ ರಸ್ತೆ	4.65
95.	ಉಪ್ಪುಂದ ಮೆಡಿಕಲ್ ಅಳ್ವೆಕೋಡಿ ರಸ್ತೆ	3.00
96.	ಉಪ್ಪುಂದ ಮೆಡಿಕಲ್ ಕರ್ಕಕಲಿ ಮೀನುಗಾರಿಕೆ ರಸ್ತೆ	1.04
97.	ಅಲ್ವೇಕೋಟಿ–ಓಲಗ ಮಂಟಪ ರಸ್ತೆ	1.25
98.	ಉಪ್ಪುಂದ ಗ್ರಾಮದಲ್ಲಿ ಓಲಗ ಮಂಟಪ ಸೇತುವೆ ಕೂಡುರಸ್ತೆ	0.40
99.	ಬೈಂದೂರು ಪೋರ್ಟ್ ರಸ್ತೆ	0.90
100.	ಶಿರೂರು ಟೌನ್‌ನಿಂದ ಸಮುದ್ರ ತೀರದವರೆಗಿನ ರಸ್ತೆ	1.90
101.	ಶಿರೂರು ಹಡವಿನಕೋಣೆಯಿಂದ ಸಮುದ್ರ ತೀರದವರೆಗಿನ ರಸ್ತೆ	1.40
102.	ಶಿರೂರಿನಿಂದ ಅಳ್ವೆಗದ್ದೆವರೆಗಿನ ಮೀನುಗಾರಿಕೆ ರಸ್ತೆ	2.40
103.	ಶೀರೂರು ಪೇಟೆ ಕರಾವಳಿ ರಸ್ತೆ	3.00
104.	ಯದ್ತರೆ ಕಸ್ಟಂ ರಸ್ತೆ	0.90
105.	ಯಡ್ತರ ಕೂಡು ರಸ್ತೆಯಿಂದ ಶೀರೂರು ಪೇಟೆ ರಸ್ತೆ	2.00
	ಒಟ್ಟು	**190.69**
	ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕಾ ಕೊಂಡಿ ರಸ್ತೆಗಳ ವಿವರ	
1.	ರಾಷ್ಟ್ರೀಯ ಹೆದ್ದಾರಿ 17 ರಿಂದ ನಚುಕಿನಭಾಗ ಮೀನುಗಾರಿಕಾ ಕೊಂಡಿ ರಸ್ತೆ	0.63

1	2	3
2.	ಗೊಟ್ನೆ ಭಾಗದಿಂದ ನಚುಕಿನಭಾಗವರೆಗೆ ಕೊಂಡಿ ರಸ್ತೆ	0.51
3.	ಗೊಟ್ನೆ ಭಾಗದಿಂದ ಉತ್ತರ ಬದಿಗೆ ಕೊಂಡಿರಸ್ತೆ	0.50
4.	ನಚುಕಿನಬಾಗ ಸೇತುವೆಯಿಂದ ಮಾಜಾಳಿ ಮೀನುಗಾರಿಕಾ ಕಾಲನಿಯವರೆಗೆ ರಸ್ತೆ	0.90
5.	ರಾಷ್ಟ್ರೀಯ ಹೆದ್ದಾರಿ 17 ರಿಂದ ಡಾಂಡೇಭಾಗ ಮೀನುಗಾರಿಕಾ ಶಾಲೆ ರಸ್ತೆ	0.91
6.	ರಾಷ್ಟ್ರೀಯ ಹೆದ್ದಾರಿ 17 ರಿಂದ ಬಾವಳ ವರೆಗೆ ರಸ್ತೆ	1.14
7.	ರಾಮನಾಥ ದೇವಸ್ಥಾನದಿಂದ ಬೀಚ್ ವರೆಗೆ ರಸ್ತೆ	0.82
8.	ದೇವಬಾಗ ಬಸ್ ಸ್ಟ್ಯಾಂಡಿನಿಂದ ಉತ್ತರದ ವರೆಗೆ ರಸ್ತೆ	0.75
9.	ದೇವಬಾಗ ಬ್ರಿಡ್ಜ್‌ನಿಂದ ಸಮುದ್ರದಂಡೆಯವರೆಗೆ ರಸ್ತೆ	2.80
10.	ದೇವಬಾಗ ಬಸ್ ಸ್ಟಾಂಡ್‌ನಿಂದ ದಕ್ಷಿಣ ಬದಿಗೆ ರಸ್ತೆ	2.80
11.	ಬಿಣಗಾ ಸಮುದ್ರ ದಂಡೆಯ ವರೆಗೆ ರಸ್ತೆ	0.50
12.	ಬೈತಖೋಲ ಆಯ್ ಎನ್ ಪಿ ರಸ್ತೆ	0.50
13.	ಸಂಕ್ರುಬಾಗನಿಂದ ಅರ್ಗಾ ವರೆಗೆ ಕೊಂಡಿ ರಸ್ತೆ	1.92
14.	ಚಂಡಿಯಾ ಆಲಿಗದ್ದಾ ದಿಂದ ಸಮುದ್ರ ದಂಡೆಯವರೆಗೆ ರಸ್ತೆ	0.75
15.	ಚಂಡಿಯಾ ಆಲಿಗದ್ದಾ ದಿಂದ ಕೊಡಾರವರೆಗೆ ರಸ್ತೆ	6.10
16.	ಆಮದಳ್ಳಿ ಕಂತ್ರಿವಾಡ ಕೊಂಡಿ ರಸ್ತೆ	1.40
17.	ಮುದ್ಗಾದಿಂದ ದಕ್ಷಿಣ ಬದಿಗೆ ರಸ್ತೆ	0.24
18.	ಆಮದಳ್ಳಿ ಬಂದರು ರಸ್ತೆ	1.72
19.	ಮುದ್ಗಾ ಕ್ರಾಸ್ ನಿಂದ ಹಾರ್ಬರವರೆಗೆ	0.74
20.	ರಾಮನಾಥ ದೇವಸ್ಥಾನದಿಂದ ದೇವಬಾಗವರೆಗೆ	0.73
21.	ನಚುಕಿನಬಾಗ ದಿಂದ ಡಾಂಡೇಬಾಗ	0.81
22.	ಹಾರವಾಡದಿಂದ ಬೇಲೇಕೇರಿ ಮೀಣುಗಾರಿಕಾ ರಸ್ತೆ	2.07
23.	ಹಾರವಾಡ ತರಂಗಮಠ ಮೀನುಗಾರಿಕಾ ರಸ್ತೆ	0.50
24.	ಕೇಣೀ ಹರಿಕಂತ್ರವಾಡಾ ಮೀನುಗಾರಿಕಾ ರಸ್ತೆ	1.22
25.	ಕೇಣಿ ದೇಶಿಬಾಗಾ ಮೀನುಗಾರಿಕಾ ರಸ್ತೆ	0.30
26.	ಕೇಣಿ ಗಾಬೀತವಾಡ ಮೀನುಗಾರಿಕೆ ರಸ್ತೆ	1.68
27.	ರೇಣಿ ಗಾಬೀತವಾಡ ಮೀನುಗಾರಿಕೆ ರಸ್ತೆ (ಉತ್ತರ)	0.23
28.	ಬೆಳಂಬರ ಖಾರ್ವಿವಾಡಾ ಮೀನುಗಾರಿಕಾ ರಸ್ತೆ	2.43
29.	ಬೆಳಂಬರ ಮುದ್ರಾಣಿ ರಸ್ತೆ	0.24
30.	ಮಂಜುಗುಣಿ ಮೀನುಗಾರಿಕಾ ರಸ್ತೆ	1.24
31.	ಹಿಚ್ಕಡ ರಸ್ತೆ	0.25
32.	ಮಂಜುಗುಣಿ ಮೀನುಗಾರಿಕಾ ರಸ್ತೆ (ಉತ್ತರ)	0.13

1	2	3
33.	ಸಾಲುಕಟ್ಟಾದಿಂದ ಹೊಳೆಗದ್ದೆವರೆಗೆ ಮೀನುಗಾರಿಕಾ ಕೂಡು ರಸ್ತೆ	1.00
34.	ಧಾರೇಶ್ವರದಿಂದ ಸಮುದ್ರ ದಂಡೆಯವರೆಗೆ	0.70
35.	ಅಳ್ವದಂಡೆ ಮೀನುಗಾರಿಕಾ ಕಾಲೋನಿಯವರೆಗೆ ರಸ್ತೆ	0.60
36.	ವನ್ನಳಿ ಮೀನುಗಾರಿಕಾ ಕಾಲೋನಿವರೆಗೆ ರಸ್ತೆ	0.70
37.	ಅಘನಾಶಿನಿ ಮುಖ್ಯ ರಸ್ತೆಯಿಂದ ಕಾಗಳ ಸಮುದ್ರ ದಂಡೆಯವರೆಗೆ ರಸ್ತೆ 1 ಹಂತ	0.70
38.	ಅಘನಾಶಿನಿ ಮುಖ್ಯ ರಸ್ತೆಯಿಂದ ಕಾಗಳ ಸಮುದ್ರ ದಂಡೆವರೆಗೆ ರಸ್ತೆ 2 ಹಂತ	1.70
39.	ಮೊಸಳೆಸಾಲು ಮೀನುಗಾರಿಕಾ ರಸ್ತೆ	1.05
40.	ಹಳಕಾರ ಮೀನುಗಾರಿಕಾ ಕಲೋನಿಯವರೆಗೆ ರಸ್ತೆ	0.30
41.	ಹಿರೇಗುತ್ತಿಯಿಂದ ಮೊರ್ಬಾ ರಸ್ತೆ	1.00
42.	ಹಿರೇಗುತ್ತಿಯಿಂದ ನುಸಿಕೋಟೆ ರಸ್ತೆ	2.80
43.	ತೊರೆಗಜನಿಯಿಂದ ಹೊಸಕಟ್ಟಾ ವರೆಗೆ ಕೂಡು ರಸ್ತೆ 1 ಹಂತ	0.90
44.	ತೊರೆಗಜನಿಯಿಂದ ಹೊಸಕಟ್ಟಾ ವರೆಗೆ ಕೂಡು ರಸ್ತೆ 2 ಹಂತ	0.60
45.	ಮೂಡಂಗಿ ಕಾಲೋನಿಯಿಂದ ಕೆ.ಕೆ.ಸಿ ವರೆಗೆ ಕೂಡು ರಸ್ತೆ	0.60
46.	ಬಂಕಿಕೊಡ್ಲುದಿಂದ ದುಬ್ಬನಶಶಿವರೆಗೆ ಕೂಡು ರಸ್ತೆ	1.95
47.	ದಬ್ಬನಶಶಿಯಿಂದ ಸಮುದ್ರ ದಂಡೆಯವರೆಗೆ	0.50
48.	ನಾಡುಮಾಸ್ಕೇರಿಯಿಂದ ಗಂಗಾವಳಿ ವರೆಗೆ ರಸ್ತೆ 1 ಹಂತ	1.50
49.	ನಾಡುಮಾಸ್ಕೇರಿಯಿಂದ ಗಂಗಾವಳಿ ವರೆಗೆ ರಸ್ತೆ 2 ಹಂತ	0.90
50.	ಹೆಡ್ಡೆ ಅಂಬಿಗರಕೇರಿ ರಸ್ತೆ	0.40
51.	ಮಾಸೂರು ಲುಕ್ಕರಿ ರಸ್ತೆ	2.00
52.	ದಿವಗಿ ಅಂಬಿಗರಕೇರಿ ರಸ್ತೆ	0.50
53.	ನವಿಲುಗೋಣ ಹಳದೀಪುರ ಕೊಂಡಿ ರಸ್ತೆ	4.60
54.	ಜಮ್ಮು ಹೌಸದಿಂದ ಹೊರಬಾಗ ಸ್ತೆ	1.20
55.	ಬೆಳೆಕೊಂಡ ರಸ್ತೆ	1.10
56.	ಸಾಲಕೂಡು ಹದಿನಬಾಳು ರಸ್ತೆ	2.30
57.	ರಾ.ಹೆ. 17 ರಿಂದ ಕಾಸರಕೋಡ ಮೀನುಗಾರಿಕೆ ಬಂದರು ರಸ್ತೆ	2.00
58.	ಕಾಸರಕೋಡ ಮೀನುಗಾರಿಕಾ ರಸ್ತೆಯಿಂದ ಸಮುದ್ರ ದಂಡೆಯವರೆಗೆ ರಸ್ತೆ	1.10
59.	ಅಪ್ಸರಕೊಂಡ ರಸ್ತೆ	1.30
60.	ಮಂಕಿ ಹಳೆಮಠದಿಂದ ಮಂಕಿಮಡಿ ರಸ್ತೆ	1.20
61.	ಮಂಕಿ ಒಣಸಾಲ ಹೊಸಹಿತ್ಲು ರಸ್ತೆ	1.00
62.	ಜೆಪ್ರಿ ಕವಣೆಯಿಂದ ನಾಕುದಾ ಮೊಹಲ್ಲಾ ರಸ್ತೆ	1.15

1	2	3
63.	ಅನಂತವಾಡಿ ಬೈಲೂರು ರಸ್ತೆ	2.50
64.	ಬೈಲೂರು ಕರಿಮೂಳ ಕೂಡು ರಸ್ತೆ	0.30
65.	ಬೈಲೂರಿನಿಂದ ಸಮುದ್ರ ದಂಡವರೆಗೆ ರಸ್ತೆ	0.40
66.	ಮುರ್ಡೇಶ್ವರದಿಂದ ತುದ್ವಳ್ಳ ಸಮುದ್ರ ದಂಡೆಯವರೆಗೆ ರಸ್ತೆ	2.50
67.	ಬಸ್ತಿಮಾವಳ್ಳಿಯಿಂದ ಮಠದಹಿತ್ಲುವರೆಗೆ ರಸ್ತೆ	1.40
68.	ಬಸ್ತಿಮಾವಳ್ಳಿ ರಸ್ತೆಯಿಂದ ದೇವಗಿರಿ ಬೀಚವರೆಗೆ ರಸ್ತೆ	1.60
69.	ಸಣಭಾವಿಯಿಂದ ಮಾಲಕೋಡು ರಸ್ತೆ (1 ಮತ್ತು 2 ನೇ ಹಂತ)	1.60
70.	ಮಾವಿನಕಟ್ಟಾದಿಂದ ಸಣಭಾವಿ ರಸ್ತೆ	1.00
71.	ಶಿರಾಲಿಯಿಂದ ಮೋಗೇರಕೇರೆ ರಸ್ತೆ	0.20
72.	ಆಳ್ವೇಕೋಡಿ ಕಟ್ಟಕಾರ ಕೊಪ್ಪಾಕೂಡು ರಸ್ತೆ	7.60
73.	ಖಾರಲ್ಯಾಂಡ ಬಿಡ್ಜ್‌ದಿಂದ ಆಳ್ವೇಕೋಡಿ ರಸ್ತೆ	0.25
74.	ಅಳ್ವೇಕೋಡಿಯಿಂದ ಕೋಡಿ ಹಿತ್ಲು ರಸ್ತೆ	0.15
75.	ತೆಂಗಿನಗುಂಡಿ ಹೆಬಳೆ ರಸ್ತೆ	0.65
76.	ಮಾವಿನಕಟ್ಟಾ ಹೆಬಳೆ ರಸ್ತೆ (1,2,3 ಮತ್ತು 4ನೇ ಹಂತ)	6.40
77.	ರಂಗಿನಕಟ್ಟಾದಿಂದ ಜಾಲಿ ಬೀಚ್‌ವರೆಗೆ ರಸ್ತೆ	0.40
78.	ಹೆಬಳೆ ವೆಂಕಟಾಪುರ (ರಾ.ಹೆ.17) ಖಾರಲ್ಯಾಂಡ್ ರಸ್ತೆ	4.80
79.	ಜಾಮೀಯಾಬಾಗದ ಹೆರತಾರ ರಸ್ತೆ	1.05
80.	ಜಾಮೀಯಾಬಾದ ಜಾಲಿ ರಸ್ತೆಯಿಂದ ಹೊನ್ನಗದ್ದೆ ರಸ್ತೆ	1.60
81.	ಮುಂಡಳ್ಳಿ ರಸ್ತೆ	0.30
82.	ಬೆಳ್ಕೆದಿಂದ ಸರ್ಪನಕಟ್ಟಾ ರಸ್ತೆ	2.40
83.	ಬೆಳ್ಕೆ ಬಪಿಹಿತ್ಲು ರಸ್ತೆ	0.05
84.	ಗೊರಟೆ ಬೀಚ ರಸ್ತೆ	2.40
85.	ಕೆ.ಬಿ.ಎಸ್. ಹೊಸಕಟ್ಟಾದಿಂದ ಗೊರಟೆ ರಸ್ತೆ	0.22
86.	ಬರಸಗುಣಿ ತಲಗುಡ್ಡ ವನ್ನಳ್ಳಿ ರಸ್ತೆ	2.65
87.	ನಚುಕಿನಭಾಗ ಸೇತುವೆಯಿಂದ ಮಾಜಾಳಿ ಮೀನುಗಾರಿಕೆ ಕಾಲೋನಿಯವರೆಗೆ ರಸ್ತೆ	0.81
88.	ಕಾಸರಕೋಡು ಟೊಂಕ ಮೀನುಗಾರಿಕಾ ರಸ್ತೆ	1.26
89.	ಹಳದಿಪುರ ಹೊಸಭಾಗ ತಾರಿಬಾಗಿಲು ರಸ್ತೆ	3.00
90.	ಹಾರವಾಡ ತರಂಗಮಠ ಗಣಪತಿ ದೇವಸ್ಥಾನದಿಂದ ಮುದ್ದಾ ರಸ್ತೆ	2.00
91.	ಕೊರಟೆ ಕುಲ್ಕೋಡ್ ಮೊಗೇರ ಕೇರಿ ರಸ್ತೆ	1.08
92.	ಕೊಪ್ಪದಮಕ್ಕಿ ಶಾಲೆಯಿಂದ ಮೊಗೇರಕೇರಿ ಬೈಲೂರ್ ಕ್ರಾಸ್ ರಸ್ತೆ	2.76
93.	ತುಳಸಿನಗರ ರಸ್ತೆ	0.55
	ಒಟ್ಟು	**128.65**

ವಿಧಾನ ಸಭಾ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4369ರ ಅನುಬಂಧ–2
ಮೀನುಗಾರಿಕೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಗೊಳಿಸಿದ ಅನುದಾನದ ಜಿಲ್ಲಾವಾರು ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವರ್ಷ	ಉ.ಕನ್ನಡ ಜಿಲ್ಲೆ	ದ.ಕನ್ನಡ ಜಿಲ್ಲೆ	ಉಡುಪಿ ಜಿಲ್ಲೆ
1	2	3	4	5
1	2000–01	23.00	38.00	73.00
2	2001–02	32.00	37.00	151.00
3	2002–03	127.00	40.00	179.00

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಮೀನುಗಾರಿಕಾ ರಸ್ತೆಗಳ ಅಭಿವೃದ್ಧಿಗೆ ಬಿಡುಗಡೆಗೊಳಿಸಲಾದ ಅನುದಾನದ ಬಗ್ಗೆ ನಾನು ಮಾಹಿತಿ ಕೇಳಿದ್ದೆ. 2000–01 ರಲ್ಲಿ ಉಡುಪಿ ಜಿಲ್ಲೆಗೆ 73 ಲಕ್ಷ ರೂಪಾಯಿಗಳು, 2001–02ರಲ್ಲಿ 1 ಕೋಟಿ 51 ಲಕ್ಷ ರೂಪಾಯಿಗಳು ಮತ್ತು 2002–03 ರಲ್ಲಿ 1 ಕೋಟಿ 79 ಲಕ್ಷ ರೂಪಾಯಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ಮಾನ್ಯ ಸಚಿವರು ನನಗೆ ಮಾಹಿತಿ ಕೊಟ್ಟಿದ್ದಾರೆ. ನನಗೆ ಬಂದ ಮಾಹಿತಿ ಪ್ರಕಾರ ಬಹುಶಃ ಇದು ಸರಿಯಲ್ಲ ಎಂದು ಕಾಣುತ್ತದೆ. ಏಕೆಂದರೆ, ಕಳೆದ ವರ್ಷ ನಮಗೆ ಬಿಡುಗಡೆಯಾದದ್ದು ಕೇವಲ 25 ಲಕ್ಷ ರೂಪಾಯಿಗಳು ಮಾತ್ರ. ಆದರೆ ಮಾನ್ಯ ಸಚಿವರು 1.51 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ ಎಂದು ಹೇಳುತ್ತಿದ್ದಾರೆ. 2002–03ರಲ್ಲಿ 1.79 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನನಗೆ ಬಂದ ಮಾಹಿತಿ ಪ್ರಕಾರ ಅಲ್ಲಿ ಬಿಡುಗಡೆಯಾಗಿರುವುದು ಕೇವಲ 25 ಲಕ್ಷ ರೂಪಾಯಿಗಳು ಮಾತ್ರ. 2003–04ನೇ ಸಾಲಿಗೆ ಅನುದಾನವೇ ಇಲ್ಲ. ಹಾಗಿದ್ದಲ್ಲಿ, ಯಾವ ರೀತಿಯಾಗಿ ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗುತ್ತದೆ? ಮಾನ್ಯ ಸಚಿವರು ಕೊಟ್ಟಂತಹ ಮಾಹಿತಿ ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡ 49.1 ಕಿ.ಮೀ., ಉಡುಪಿ ಜಿಲ್ಲೆಯಲ್ಲಿ 190.69 ಕಿ.ಮೀ. ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 128.65 ಕಿ.ಮೀ., ಒಟ್ಟಾರೆಯಾಗಿ ಕರ್ನಾಟಕ ರಾಜ್ಯದಲ್ಲಿ ಸುಮಾರು 368.35 ಕಿ.ಮೀ. ರಸ್ತೆ ಇದೆ. ಈ ರಸ್ತೆಗಳಲ್ಲಿ ನಾವು ಈಗಾಗಲೇ 224 ರಸ್ತೆಗಳನ್ನು ಐಡೆಂಟಿಫೈ ಮಾಡಿದ್ದೇವೆ. ಇವತ್ತು 2000ನೇ ಇಸವಿಗೆ ಉತ್ತರ ಕನ್ನಡ ಜಿಲ್ಲೆಗೆ 23 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಗೆ 38 ಲಕ್ಷ ರೂಪಾಯಿಗಳು ಮತ್ತು ಉಡುಪಿ ಜಿಲ್ಲೆಗೆ 73 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೇವೆ. 2001–02ನೇ ಸಾಲಿಗೆ ಉತ್ತರ ಕನ್ನಡ ಜಿಲ್ಲೆಗೆ 32 ಲಕ್ಷ ರೂಪಾಯಿಗಳು, ದಕ್ಷಿಣ ಕನ್ನಡ ಜಿಲ್ಲೆಗೆ 37 ಲಕ್ಷ ರೂಪಾಯಿಗಳು ಮತ್ತು ಉಡುಪಿ ಜಿಲ್ಲೆಗೆ 151 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 2002–03ನೇ ಸಾಲಿಗೆ ಉತ್ತರ ಕನ್ನಡ ಜಿಲ್ಲೆಗೆ 127 ಲಕ್ಷ ರೂಪಾಯಿಗಳು, ದಕ್ಷಿಣ ಕನ್ನಡ ಜಿಲ್ಲೆಗೆ 40 ಲಕ್ಷ ರೂಪಾಯಿಗಳು ಮತ್ತು ಉಡುಪಿ ಜಿಲ್ಲೆಗೆ 179 ಲಕ್ಷ ರೂಪಾಯಿಗಳು, ಹೀಗೆ ಒಟ್ಟಾರೆಯಾಗಿ 700 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ನಾವು ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಒಟ್ಟಾರೆಯಾಗಿ ಕಳೆದ ಮೂರು ವರ್ಷಗಳಲ್ಲಿ ನಾವು RIDF–4 ರಲ್ಲಿ 7 ಕಾಮಗಾರಿಗಳನ್ನು ಸುಮಾರು 97 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡಿ ಮುಗಿಸಿದ್ದೇವೆ.

RIDF–5 ರಲ್ಲಿ ಸುಮಾರು 6 ಕಾಮಗಾರಿಗಳನ್ನು 94.63 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತೆಗೆದುಕೊಂಡಿದ್ದೇವೆ. RIDF–7 ರಲ್ಲಿ 18 ಕಾಮಗಾರಿಗಳನ್ನು 370.12 ಲಕ್ಷ ರೂಪಾಯಿಗಳಲ್ಲಿ ತೆಗೆದುಕೊಂಡಿದ್ದೇವೆ. RIDF–8 ರಲ್ಲಿ 25 ಕಾಮಗಾರಿಗಳನ್ನು 672.27 ಲಕ್ಷ ರೂಪಾಯಿಗಳಲ್ಲಿ ಈಗಾಗಲೇ ನಾವು ಮಾಡಿದ್ದೇವೆ. ಅದೇ ರೀತಿಯಲ್ಲಿ ಪ್ರಾಮುಖ್ಯವಾಗಿ ಉಡುಪಿ ಜಿಲ್ಲೆಗೆ RIDF ನಲ್ಲಿ 24 ರಸ್ತೆ ಕಾಮಗಾರಿಗಳನ್ನು ಮತ್ತು 7 ಸೇತುವೆಗಳನ್ನು ಸುಮಾರು 403 ಲಕ್ಷ ರೂಪಾಯಿಗಳಲ್ಲಿ 31 ಕಾಮಗಾರಿಗಳನ್ನು ನಾವು ಪ್ರಾರಂಭ ಮಾಡಿದ್ದೇವೆ.

ಶ್ರೀ ಯು.ಆರ್.ಸಭಾಪತಿ : ಮಾನ್ಯ ಅಧ್ಯಕ್ಷರೇ, ನಾನು ಕಾಮಗಾರಿಗಳನ್ನು ಮಾಡಿದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಿಲ್ಲ. ನಾನು ಕೇಳುತ್ತಿರುವುದು ಏನೆಂದರೆ, 2000–01ರಲ್ಲಿ ಇಡೀ ರಾಜ್ಯಕ್ಕೆ ಕೇವಲ 1 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. 2001–02ರಲ್ಲಿ ಇಡೀ ರಾಜ್ಯಕ್ಕೆ 25 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. 2002–03ರಲ್ಲಿ ಇಡೀ ರಾಜ್ಯಕ್ಕೆ 25 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ನಾನು ಬಿಡುಗಡೆಯಾದ ಹಣದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಇಲ್ಲಿ ಕೊಟ್ಟಂತಹ ಮಾಹಿತಿ ಪ್ರಕಾರ 2002–03ರಲ್ಲಿ ಉಡುಪಿ ಜಿಲ್ಲೆಗೇ 1 ಕೋಟಿ 79 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ನಾನು ಹೇಳುತ್ತಿರುವುದು ಏನೆಂದರೆ, ಬಿಡುಗಡೆಯಾದ ಹಣ ಕೇವಲ 25 ಲಕ್ಷ ರೂಪಾಯಿಗಳು ಮಾತ್ರ. ನಿಖರವಾದಂತಹ ಮಾಹಿತಿಯೊಂದಿಗೆ ಈ ವಿಚಾರವನ್ನು ನಾನು ಸದನದಲ್ಲಿ ಹೇಳುತ್ತಿದ್ದೇನೆ.

ಶ್ರೀ ವಸಂತ ವಿ.ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಈ ರಾಜ್ಯದಲ್ಲಿ ಎಷ್ಟು ಕಿಲೋಮೀಟರ್ ರಸ್ತೆಗಳಿವೆ ಮತ್ತು ಈ ರಸ್ತೆಗಳ ಅಭಿವೃದ್ಧಿ ಪಡಿಸಲು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ಕೇಳಿದ್ದಾರೆ. ಅದಕ್ಕೆ ಸಮರ್ಪಕವಾದಂತಹ ಉತ್ತರವನ್ನು ನಾನು ಕೊಟ್ಟಿದ್ದೇನೆ.

ಶ್ರೀ ಯು.ಆರ್.ಸಭಾಪತಿ : ಮಾನ್ಯ ಅಧ್ಯಕ್ಷರೇ, ನಾನು ಬಿಡುಗಡೆಯಾದಂತಹ ಹಣದ ಬಗ್ಗೆ ಇಲ್ಲಿ ಕೇಳುತ್ತಿದ್ದೇನೆ. ಹಣ ಬಿಡುಗಡೆಯಾಗಿರುವ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅವರು ಹೇಳಿರುವಷ್ಟು ಹಣ ಬಿಡುಗಡೆಯಾಗಿಲ್ಲ. ಕಳೆದ ಬಾರಿ ಬಿಡುಗಡೆಯಾಗಿರುವುದು ಕೇವಲ 25 ಲಕ್ಷ ರೂಪಾಯಿಗಳು ಮಾತ್ರ. ಆದರೆ ಮಾನ್ಯ ಸಚಿವರು 1 ಕೋಟಿ 79 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಎಂಬ ತಪ್ಪು ಮಾಹಿತಿಯನ್ನು ಈ ಸದನದಲ್ಲಿ ಕೊಟ್ಟರೆ, ಅದು ನಾಳೆ ಹಕ್ಕುಚ್ಯುತಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ನಾನು ಮಾನ್ಯ ಸಚಿವರ ಹತ್ತಿರ ಸೂಕ್ತವಾದಂತಹ ಉತ್ತರವನ್ನು ಅಪೇಕ್ಷೆ ಮಾಡುತ್ತಿದ್ದೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ತಪ್ಪು ಮಾಹಿತಿ ಬಂದಿರಬಹುದು. ಆದರೆ ನನ್ನ ಇಲಾಖೆಯ ಬಗ್ಗೆ ನನಗೆ ವಿಶ್ವಾಸ ಇದೆ. ಈಗ RIDF–4 ರಲ್ಲಿ ನಾವು ಒಟ್ಟಾಗಿ ಕರ್ನಾಟಕದಲ್ಲಿ 7 ಕಾಮಗಾರಿಗಳನ್ನು ಈಗಾಗಲೇ 97.88 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮುಗಿಸಿದ್ದೇವೆ.

ಶ್ರೀ ಕೆ. ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೇ, ಉಡುಪಿ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಕರಾವಳಿ ರಸ್ತೆ ಇರುವುದು ನನ್ನ ಬೈಂದೂರು ಕ್ಷೇತ್ರದಲ್ಲಿ ಮಾತ್ರ. ಮಾನ್ಯ ಸದಸ್ಯರಾದ ಸಭಾಪತಿಯವರು ಪ್ರಸ್ತಾಪಿಸಿರತಕ್ಕಂಥ ಪ್ರಶ್ನೆಯಲ್ಲಿ ಆ ರಸ್ತೆಗಳ ಮೈಂಟೇನಸ್ ಬಗ್ಗೆ ಕೇಳಲಾಗಿದೆ. ಇಲ್ಲಿ ಹೊಸ ರಸ್ತೆಗಳ ಪ್ರಸ್ತಾವನೆ ಬಗ್ಗೆ ಕೇಳಿಲ್ಲ ಅಥವಾ ನಬಾರ್ಡ್ ನೆರವಿನಿಂದ ಮಾಡತಕ್ಕ ರಸ್ತೆಗಳ ಬಗ್ಗೆ ಕೇಳಿಲ್ಲ. ನಮ್ಮ

ಬೇಡಿಕೆ ಏನೆಂದರೆ, ಕರಾವಳಿ ಮೀನುಗಾರಿಕಾ ರಸ್ತೆಯನ್ನು ರಿಪೇರಿ ಮಾಡಲಿಕ್ಕೆ ಸರ್ಕಾರದವರು ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬುದೇ ಆಗಿದೆ. ಇವತ್ತು ಅತಿವೃಷ್ಟಿಯಿಂದಾಗಿ ಇಡೀ ರಸ್ತೆಗೆ ಹೊಂಡ ಬಿದ್ದಿದೆ. ಈ ರಸ್ತೆ ರಿಪೇರಿಯನ್ನು ಮಾಡಲಿಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದವರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ? ಮೀನುಗಾರಿಕಾ ಇಲಾಖೆಯ ರಸ್ತೆಯನ್ನು, ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು ಮಾಡುವ ರೀತಿಯಲ್ಲಿ ಮೈಂಟೇನಸ್ ಮಾಡಬೇಕು. ಈ ರಸ್ತೆಯನ್ನು ಮೈಂಟೇನಸ್ ಮಾಡದಿರುವುದರಿಂದ ರಸ್ತೆಗಳು ಹಾಳಾಗಿವೆ. ಇದರ ಬಗ್ಗೆ ಮಾನ್ಯ ಸಚಿವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ?

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಕಡೆಗಳಲ್ಲಿ ಮೀನುಗಾರಿಕೆ ಇಲಾಖೆಗೆ ಅತ್ಯಂತ ಪ್ರಾಮುಖ್ಯವಾದಂತಹ ರಸ್ತೆಗಳು ಇವೆ. ಮೊನ್ನೆ ತಾನೇ ಬರ ಬಂದಿತು. ಈ ಸಂದರ್ಭದಲ್ಲಿ National Highway ಎಲ್ಲಿಯಾದರೂ ಹಾಳಾದರೆ, ಇದನ್ನು alternative ರಸ್ತೆಯಾಗಿ ನಾವು ಪರಿಗಣಿಸುತ್ತಿದ್ದೇವೆ. ಸಾಧಾರಣವಾಗಿ ನಮ್ಮ ಬಾರ್ಡರ್‌ನ ತಳಪಾಡಿನಿಂದ ಹಿಡಿದು ಬೈಂದೂರಿನವರೆಗೆ ಬಹಳಷ್ಟು ಇಂತಹ ರಸ್ತೆಗಳು ಇವೆ. ಇವುಗಳೂ ದುರಸ್ತಿಯಾಗಿರುವುದಿಲ್ಲ. ಮಾನ್ಯ ಸಚಿವರಿಗೆ ಬಜೆಟ್‌ನಲ್ಲಿ ಇದಕ್ಕಾಗಿ 25 ಲಕ್ಷ ರೂಪಾಯಿಗಳು ಮಾತ್ರ ಸಿಕ್ಕಿರುವುದರಿಂದ ಈ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಅವರಿಗೆ ಕಷ್ಟವಾಗುತ್ತದೆ. ಬಹಳ ಪ್ರಾಮುಖ್ಯವಾದಂತಹ ರಸ್ತೆಯಾಗಿರುವುದರಿಂದ ಇದಕ್ಕೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಸೂರತ್ಕಲ್, ಮುಕ್ಕಾ ಮತ್ತು ಸಸಿಹಿತ್ಲು ರಸ್ತೆ ಎಂದು ಒಂದು ಸ್ಥಳ ಇದೆ. ಅಲ್ಲಿ ಬಸ್ಸುಗಳು ಓಡಾಡಲು ಬಹಳ ಕಷ್ಟವಾಗುತ್ತಿದೆ. ಮೊನ್ನೆ ತಾನೇ ಸಾರ್ವಜನಿಕರೆಲ್ಲಾ ಸೇರಿ ಸ್ಟ್ರೈಕ್ ಅನ್ನೂ ಸಹ ಮಾಡಿದ್ದಾರೆ. ಆದ್ದರಿಂದ National Highwayಗೆ ಪಕ್ಕದಲ್ಲೇ ಇರುವಂತಹ ಪ್ರಾಮುಖ್ಯವಾದಂತಹ ರಸ್ತೆಯ ಅಭಿವೃದ್ಧಿಯನ್ನು ಶೀಘ್ರದಲ್ಲೇ ಕೈಗೆತ್ತಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿರುವಂತಹ ಮೀನುಗಾರಿಕಾ ರಸ್ತೆಗಳನ್ನು ನಗಣ್ಯ ಮಾಡದೆ ಅದರ ಬಗ್ಗೆ ಯಾವ ಪ್ರಾಮುಖ್ಯತೆ ಕೊಡಬೇಕು ಅದನ್ನು ಕೊಟ್ಟಿಲ್ಲ ಎನ್ನುವ ನೋವನ್ನು ಪ್ರಕಟಣೆ ಮಾಡುತ್ತಾ, ಮೀನುಗಾರಿಕಾ ಇಲಾಖೆಯಲ್ಲಿ ಕಡಲಕೊರೆತ ಇರಲಿ, ರಸ್ತೆ ಇರಲಿ ಇದರ ಕಾಮಗಾರಿ ಆಗಬೇಕಾಗಿದೆ. ನೊಂದವರು ಮೀನುಗಾರಿಕಾ ಸಚಿವರ ಕಾಲು ಹಿಡಿಯುವ ಬಗ್ಗೆ ಏನಾದರೂ ಆದೇಶ ಮಾಡಿದ್ದಾರಾ ಎಂದು ಹೇಳುವುದರ ಬಗ್ಗೆ ಕೂಡ ತಮ್ಮಲ್ಲಿ ನಾನು ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಗೋಪಾಲ ಪೂಜಾರಿಯವರು ಒಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸೆಪರೇಟ್ ಪ್ರಶ್ನೆ ಕೇಳಬೇಕಾಗಿದೆ. ಏಕೆಂದರೆ ಮೀನುಗಾರಿಕಾ ರಸ್ತೆ ರಿಪೇರಿ ಬಗ್ಗೆ ಸೆಪರೇಟ್ ಪ್ರಶ್ನೆ ಕೇಳಬೇಕಾಗಿದೆ. ಅದನ್ನು ಕೇಳಿದರೆ ನಾನು ಖಂಡಿತವಾಗಿ ಉತ್ತರ ಕೊಡುತ್ತೇನೆ.

ಶ್ರೀ ಪಿ. ಗೋಪಾಲ ಪೂಜಾರಿ : ನಾನು ಕೇಳಿದ್ದು ಮೀನುಗಾರಿಕಾ ರಸ್ತೆ ಸಂಪೂರ್ಣ ಹಾಳಾಗಿದೆ. ಅತಿವೃಷ್ಟಿಯಿಂದ ಸಂಪೂರ್ಣ ನಾಶವಾಗಿದೆ. ಮೈಂಟೆನೆನ್ಸ್‌ಗೆ ಅವರು ಉಪ ಪ್ರಶ್ನೆ ಕೇಳಿದ್ದಾರೆ. ನಾನು ಹಾಳಾದ ರಸ್ತೆ ಲೋಕೋಪಯೋಗಿ ಇಲಾಖೆಯವರು ಯಾವ ರೀತಿ ಮೈಂಟೇನ್

ಮಾಡುತ್ತಾರೆ, ಜಿಲ್ಲಾ ಪಂಚಾಯಿತಿ ರಸ್ತೆ ಯಾವ ರೀತಿ ಮೇಂಟೇನ್ ಮಾಡುತ್ತಾರೆ ಅದೇ ರೀತಿ ಮೀನುಗಾರಿಕಾ ರಸ್ತೆಗೆ ಏಕೆ ಹಣ ಬಿಡುಗಡೆ ಮಾಡಲಿಲ್ಲವೆಂದು ಕೇಳಿದೆ.

ಅಧ್ಯಕ್ಷರು : ಅದಕ್ಕೆ ಸೆಪರೇಟ್ ಪ್ರಶ್ನೆ ಕೇಳಿ ಎಂದು ಹೇಳಿದ ಮೇಲೆ ಮತ್ತೆ ಏಕೆ ಕೇಳುತ್ತೀರಿ?

ಶ್ರೀ ಎನ್.ಯೋಗೀಶ್ ಭಟ್ : ನಾನು ಒಂದು ಪಾಯಿಂಟ್ ರೈಸ್ ಮಾಡಿದ್ದೇನೆ. ಮೀನುಗಾರಿಕಾ ಇಲಾಖೆಯಲ್ಲಿ ಕಾಮಗಾರಿ ಆಗಬೇಕಾಗಿದ್ದರೆ ನೊಂದ ಜನರು ಮಾನ್ಯ ಮೀನುಗಾರಿಕಾ ಸಚಿವರ ಕಾಲು ಹಿಡಿಯುವ ಒಂದು ಆದೇಶ ಮಾಡಿದ್ದಾರೆಂದು ಸಾರ್ವಜನಿಕವಾಗಿ ಪ್ರಕಟವಾಗಿದೆ. ಇದರ ಬಗ್ಗೆ ಅವರು ಉತ್ತರ ಕೊಡಬೇಕು. ಇದು ಉದಯ ಟೀವಿಯಿಂದ ಹಿಡಿದು ಎಲ್ಲದರಲ್ಲಿ ಬಂದಿದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ರಾಜಕೀಯ ಮಾತನಾಡಿದರೆ ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಅನೇಕ ಸಚಿವರು ಬರುತ್ತಾರೆ, ಹೋಗುತ್ತಾರೆ. ನಾವು ಅದೇ ತರಹ ಉತ್ತರ ಕೊಡಬೇಕಾಗುತ್ತದೆ?

(ಗೊಂದಲ)

Mr. Speaker : You have no right to answer. The minister is there to reply.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಇದು ಪ್ರಥಮ ಬಾರಿ ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಮ್ಮ ರಾಜ್ಯದಲ್ಲಿ ಮೂರು ವರ್ಷಗಳಲ್ಲಿ 700 ಲಕ್ಷ ರೂಪಾಯಿ ಖರ್ಚು ಮಾಡಿ ಮಾಡಿದ ಕಾಮಗಾರಿ ಇವತ್ತು ಯಾವುದೇ ಸರ್ಕಾರ ಮಾಡಿಲ್ಲ. ಅದಕ್ಕೆ ತಾವು ಪ್ರಶಂಸೆ ಮಾಡಬೇಕಾಗಿದೆ. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೂ ನಮಗೆ ಸಂಪೂರ್ಣವಾದ ಸಹಕಾರ ಕೊಟ್ಟು 700 ಲಕ್ಷ ರೂಪಾಯಿ ಖರ್ಚು ಮಾಡಿ ಕಾಮಗಾರಿ ಮುಗಿಸಿದ್ದಾರೆ. ರಸ್ತೆ ರಿಪೇರಿ ಬಗ್ಗೆ ಮಾನ್ಯ ಗೋಪಾಲ ಪೂಜಾರಿಯವರು ಹೇಳಿದ್ದಾರೆ. ಇದನ್ನು ನಾನು ನನ್ನ ಇಲಾಖೆಯವರ ಜೊತೆ ಚರ್ಚೆ ಮಾಡಿ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟು, ಮಾನ್ಯ ಮುಖ್ಯಮಂತ್ರಿಗಳಿಗೂ ಪ್ರಸ್ತಾವನೆ ಕಳುಹಿಸಿ ಅಡಿಷನಲ್ ಫಂಡ್ ಕೇಳಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಸದನದ ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗಬಾರದು. ಇಷ್ಟೊಂದು ಹಣ ಸ್ಯಾಂಕ್ಷನ್ ಆಗಿದೆ ಎಂದು ಹೇಳಿ ಮೀನುಗಾರಿಕಾ ರಸ್ತೆ ದುರಸ್ತಿಗೆ ಇದುವರೆಗೆ ಹಣ ಕೊಟ್ಟಿಲ್ಲ.

Mr. Speaker : I can't allow. Still 10 questions are there.

ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಸೇವಾ ಸಹಕಾರಿ ಸೊಸೈಟಿಗಳಲ್ಲಿರುವ ದಾಸ್ತಾನು ಬಗ್ಗೆ

466(4170) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಸೇವಾ ಸಹಕಾರಿ ಸೊಸೈಟಿಗಳಲ್ಲಿರುವ ಒಟ್ಟು ದಾಸ್ತಾನು ಬಟ್ಟೆಗಳ ಮೊತ್ತವೆಷ್ಟು; ಅವುಗಳ ತೀರುವಳಿಗಾಗಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು;

ಆ) ಆಸ್ಪತ್ರೆಗಳಿಗೆ, ಹಾಸ್ಟೆಲ್‌ಗಳಿಗೆ ಮತ್ತಿತರ ಸೂಕ್ತ ಕಡೆಗಳಿಗೆ ದಾಸ್ತಾನು ಬಟ್ಟೆಗಳನ್ನು ಖರೀದಿಸಲು ಸರ್ಕಾರ ಕ್ರಮ ಜರುಗಿಸುವರೆ;

ಇ) ಸಬ್ಸಿಡಿ ನೀಡುವ ಯೋಜನೆ ಯಾವ ಹಂತದಲ್ಲಿದೆ?